ಓ.ಎಸ್.ನಂ.172/2018.

ಡಿ.ಡಬ್ಲ್ಯೂ:2

**ದಿನಾಂಕಃ09.12.2021 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀ ಸವಾಲುಃವಾದಿಗಳ ಪರ ಶ್ರೀ ಟಿ.ಜಿ.ಎಸ್. ವಕೀಲರಿಂದಃ**

ಎಸ್.ಬಿದರೆ ಗ್ರಾಮದಲ್ಲಿ ನಾನು ಸುಮಾರು 55 ವರ್ಷಗಳಿಂದ ವಾಸವಾಗಿದ್ದೇನೆ. ವಾದಿಗಳು ನನ್ನ ಅಣ್ಣ-ತಮ್ಮಂದಿರ ಮಕ್ಕಳು ಅಂದರೆ ಸರಿ, ಅವರೆಲ್ಲರೂ ಬೆಂಗಳೂರಿನಲ್ಲಿ ವಾಸವಾಗಿದ್ದಾರೆ ಅಂದರೆ ಸರಿ. 1 ಮತ್ತು 2 ನೇ ವಾದಿಗಳ ಅಜ್ಜ ಹಾಗೂ 3 ರಿಂದ 6 ನೇ ವಾದಿಗಳ ತಂದೆ ಹನುಮಂತಶೆಟ್ಟಿ ಬಿನ್ ಮರ್ಲೆ ತಿಮ್ಮಶೆಟ್ಟಿ ಅವರು 1954 ರಲ್ಲಿ ದಾವಾ ಆಸ್ತಿಯನ್ನು ಖರೀದಿ ಮಾಡಿದ್ದರು ಅಂದರೆ ಸರಿ.

ಸಾಕ್ಷಿ ಮುಂದುವರಿದು ಸದರಿ ಹನುಮಂತಶೆಟ್ಟಿ ನನ್ನ ತಂದೆಯ ಅಣ್ಣ ಆಗಿರುತ್ತಾರೆ ಎಂದು ನುಡಿಯುತ್ತಾರೆ. ಹನುಮಂತಶೆಟ್ಟಿ ಬಿನ್ ಮರ್ಲೆ ತಿಮ್ಮಶೆಟ್ಟಿ ಅವರು ಸ್ವಂತ ಹಣದಿಂದ ದಾವಾ ಆಸ್ತಿಯನ್ನು ಖರೀದಿ ಮಾಡಿದ್ದರು ಅಂದರೆ ಸರಿ. ವೆಂಕಟಶೆಟ್ಟಿ ಮತ್ತು ತಿಮ್ಮಶೆಟ್ಟಿ ಎಂಬುವವರು ಹನುಮಂತಶೆಟ್ಟಿ ಬಿನ್ ಮರ್ಲೆ ತಿಮ್ಮಶೆಟ್ಟಿರವರ ಸಹೋದರರು ಅಂದರೆ ಸರಿ. ಸದರಿ ವೆಂಕಟಶೆಟ್ಟಿ ಮತ್ತು ತಿಮ್ಮಶೆಟ್ಟಿ ಅವರು ಮೃತಪಟ್ಟಿರುತ್ತಾರೆ ಅಂದರೆ ಸರಿ. 1 ರಿಂದ 5 ನೇ ಪ್ರತಿವಾದಿಗಳು ಸದರಿ ಮೃತ ವೆಂಕಟಶೆಟ್ಟಿ ಅವರ ಮಕ್ಕಳು ಅಂದರೆ ಸರಿ. 6 ನೇ ಪ್ರತಿವಾದಿಯು ಸದರಿ ಮೃತ ತಿಮ್ಮಶೆಟ್ಟಿ ಅವರ ಒಬ್ಬನೇ ಮಗ ಅಂದರೆ ಸರಿ. ಹನುಮಂತಶೆಟ್ಟಿ ಬಿನ್ ಮರ್ಲೆ ತಿಮ್ಮಶೆಟ್ಟಿರವರಿಗೆ ಶಾರದಮ್ಮ ಎಂಬ ಮಗಳಿದ್ದು ಅವರು ಮೃತಪಟ್ಟಿರುತ್ತಾರೆ ಅಂದರೆ ಸರಿ. ಮೃತ ಶಾರದಮ್ಮ ಅವರಿಗೆ ನಾಲ್ಕು ಗುಂಡು ಮಕ್ಕಳು ಮತ್ತು ಎರಡು ಜನ ಹೆಣ್ಣು ಮಕ್ಕಳಿರುತ್ತಾರೆ, ಅವರು ಹೆಸರುಗಳು ಗೊತ್ತಿಲ್ಲ. ಶಾರದಮ್ಮ ಅವರನ್ನು ಚಿಕ್ಕಮಗಳೂರು ತಾಲ್ಲೂಕಿನ ಕೆ.ಬಿ.ಹಾಳು ಗ್ರಾಮಕ್ಕೆ ಕೊಟ್ಟು ಮದುವೆ ಮಾಡಿಕೊಡಲಾಗಿತು. ಮೃತ ಶಾರದಮ್ಮ ಅವರನ್ನು ಹೊರತುಪಡಿಸಿ ವಾದಿಗಳೇ ಹನುಮಂತಶೆಟ್ಟಿ ಬಿನ್ ಮರ್ಲೆ ತಿಮ್ಮಶೆಟ್ಟಿರವರ ವಾರಸುದಾರರು ಅಂದರೆ ಸರಿ. ಅವರುಗಳನ್ನು ಹೊರತುಪಡಿಸಿ ಹನುಮಂತಶೆಟ್ಟಿ ಬಿನ್ ಮರ್ಲೆ ತಿಮ್ಮಶೆಟ್ಟಿರವರಿಗೆ ಬೇರೆ ವಾರಸುದಾರರು ಇಲ್ಲ ಅಂದರೆ ಸರಿ.

1954 ರಲ್ಲಿ ದಾವಾ ಆಸ್ತಿಯನ್ನು ಹನುಮಂತಶೆಟ್ಟಿ ಬಿನ್ ಮರ್ಲೆ ತಿಮ್ಮಶೆಟ್ಟಿರವರು ಖರೀದಿಸಿದ ನಂತರ ಅವರೇ ಸಾಗುವಳಿ ಮಾಡುತ್ತಿದ್ದರು ಅಂದರೆ, ಸಾಕ್ಷಿಯು ನಾವು ಮತ್ತು ಅವರು ಇಬ್ಬರು ಒಟ್ಟಿಗೆ ಸಾಗುವಳಿ ಮಾಡುತ್ತಿದ್ದೆವು ಎಂದು ನುಡಿಯುತ್ತಾರೆ. ವಾದಿಗಳು ಬೆಂಗಳೂರಿನಲ್ಲಿ ವಾಸ ಇದ್ದರೂ ಸಹ ಊರಿಗೆ ಬಂದು ಹೋಗುತ್ತಿದ್ದರು ಅಂದರೆ ಸರಿ. ವಾದಿಗಳು ಬೆಂಗಳೂರಿನಲ್ಲಿ ವಾಸ ಇದ್ದ ಕಾರಣ ದಾವಾ ಆಸ್ತಿಯನ್ನು ನಮ್ಮ ಕಡೆಯಿಂದ ಉಳುಮೆ ಮಾಡಿಸುತ್ತಿದ್ದರು ಅಂದರೆ, ಸಾಕ್ಷಿಯು ನಮ್ಮ ಹಿಸ್ಸೆಗೆ ಬಂದ ಆಸ್ತಿಯನ್ನು ಮಾತ್ರ ನಾವು ಉಳುಮೆ ಮಾಡುತ್ತಿದ್ದೆವು ಎಂದು ನುಡಿಯುತ್ತಾರೆ. ವಾದಿಗಳು ಬೆಂಗಳೂರಿನಲ್ಲಿ ವಾಸ ಇರುವುದರಿಂದ ಅವರ ಗಮನಕ್ಕೆ ಬಾರದಂತೆ ನನ್ನ ತಂದೆ ವೆಂಕಟಶೆಟ್ಟಿ ಮತ್ತು ನನ್ನ ಚಿಕ್ಕಪ್ಪ 6 ನೇ ಪ್ರತಿವಾದಿ ತಂದೆ ತಿಮ್ಮಶೆಟ್ಟಿ ಅವರು ದಾವಾ ಆಸ್ತಿ

ಪೈಕಿ ತಲಾ 17 ಗುಂಟೆ ಜಮೀನನ್ನು ಕಂದಾಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ಖಾತೆ ವರ್ಗಾವಣೆ ಮಾಡಿಸಿಕೊಂಡಿರುತ್ತೇವೆ ಅಂದರೆ ಸರಿಯಲ್ಲ. ನನ್ನ ತಂದೆ ವೆಂಕಟಶೆಟ್ಟಿ ಅವರ ಮರಣಾ ನಂತರ ನಾನು ಮತ್ತು 2 ರಿಂದ 5 ನೇ ಪ್ರತಿವಾದಿಗಳು ಬಲವಂತವಾಗಿ ವಾದಿಗಳನ್ನು ಹೊತದಬ್ಬಿ ದಾವಾ ಆಸ್ತಿಯ ಪೈಕಿ 17 ಗುಂಟೆ ಆಸ್ತಿಯ ಸ್ವಾಧೀನಾನುಭವ ಹೊಂದಿರುತ್ತೇವೆ ಅಂದರೆ ಸರಿಯಲ್ಲ. 6 ನೇ ಪ್ರತಿವಾದಿ ತಂದೆ ತಿಮ್ಮಶೆಟ್ಟಿ ಮರಣಾ ನಂತರ ದಾವಾ ಆಸ್ತಿ ಪೈಕಿ 17 ಗುಂಟೆ ಜಮೀನನ್ನು 6 ನೇ ಪ್ರತಿವಾದಿ ಪವತಿ ಮೇರೆಗೆ ತನ್ನ ಹೆಸರಿಗೆ ಖಾತೆ ವರ್ಗಾವಣೆ ಮಾಡಿಕೊಂಡಿರುತ್ತಾರೆ ಅಂದರೆ ಸರಿ. 6 ನೇ ಪ್ರತಿವಾದಿಯು ಸಹ ದಾವಾ ಆಸ್ತಿ ಪೈಕಿ 17 ಗುಂಟೆ ಜಮೀನಿನಿಂದ ಬಲವಂತವಾಗಿ ಹೊರಹಾಕಿರುತ್ತಾರೆ ಅಂದರೆ ಸರಿಯಲ್ಲ. ನಾವು ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿರುವ ಬಗ್ಗೆ ಕುಟುಂಬದಲ್ಲಿ ಯಾವುದೇ ವಿಭಾಗಗಳನ್ನು ಮಾಡಿಕೊಂಡಿರುವುದಿಲ್ಲ. ದಾವಾ ಆಸ್ತಿಯನ್ನು ಹೊರುತುಪಡಿಸಿ ಒಟ್ಟು ಕುಟುಂಬದ ಇತರೆ ಆಸ್ತಿಗಳು ವಿಭಾಗವಾಗಿರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. 1 ಮತ್ತು 2 ನೇ ವಾದಿಗಳ ಅಜ್ಜ ಹಾಗೂ 3 ರಿಂದ 6 ವಾದಿಗಳ ತಂದೆ ಹನುಮಂತಶೆಟ್ಟಿ ಬಿನ್ ಮರ್ಲೆ ತಿಮ್ಮಶೆಟ್ಟಿರವರಿಗೆ ದಾವಾ ಆಸ್ತಿ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ ಅಂದರೆ ಸರಿಯಲ್ಲ. ಪ್ರತಿವಾದಿಗಳಾದ ನಮಗೆ ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಅಧಿಕಾರ ಇಲ್ಲ ಅಂದರೆ ಸರಿಯಲ್ಲ. ದಾಖಲೆಗಳನ್ನು ಸೃಷ್ಠಿಸಿಕೊಂಡು ಬಲವಂತವಾಗಿ ವಾದಿಗಳನ್ನು ದಾವಾ ಆಸ್ತಿಯಿಂದ ಹೊರಹಾರುತ್ತೇವೆ ಅಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ದೀಪು ಎಂ.ಟಿ.)
3 ನೇ.ಹೆ.ಪ್ರಃದಃನ್ಯಾಃದಂ.,ರವರು, ಕಡೂರು.